ನಿವೇದನೆ

# ವಿದ್ಯಾಗಮ ಎನ್ನುವ ಆಕರ್ಷಕ ಶೀರ್ಷಿಕೆ ಅನುಷ್ಠಾನಕ್ಕುಂಟು ನೂರೆಂಟು ಕೊರತೆ

ಶಾಲೆಗೆ ಬರುವುದು ಸಾಧ್ಯವಾಗದ ಸಂದರ್ಭದಲ್ಲಿ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ 'ವಿದ್ಯಾಗಮ' ಯೋಜನೆಯ ಆಶಯ ಚೆನ್ನಾಗಿದೆ. ಆದರೆ, ಈ ಯೋಜನೆಯ ಅನುಷ್ಠಾನ ಪ್ರಾಯೋಗಿಕವಾಗಿ ಸಾಧ್ಯವೇ? 'ವಿದ್ಯಾಗಮ' ಕೂಡ ಅಸಮಾನ ಶಿಕ್ಷಣದ ಮತ್ತೊಂದು ರೂಪವಲ್ಲವೇ?

ಸರ್ಕಾರಿ ಶಾಲಾ ಮಕ್ಕಳ ಕಲಿಕೆಯನ್ನು ಗಮನದಲ್ಲಿಟ್ಟುಕೊಂಡು 'ವಿದ್ಯಾಗಮ' ಹೆಸರಿನ ನಿರಂತರ ಕಲಿಕಾ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆ ರೂಪಿಸಿದೆ. ಶಾಲೆಗಳು ಮುಚ್ಚಿರುವ ಸಮಯದಲ್ಲಿ ಮಕ್ಕಳ ಕಲಿಕೆಗೆ ಅವಕಾಶ ಕಲ್ಪಿಸುವ ಹಾಗೂ ಅವರನ್ನು ನಿರಂತರವಾಗಿ ಶಾಲೆಯೊಂದಿಗೆ ಸಂಪರ್ಕದಲ್ಲಿಡುವ ಮುಖ್ಯ ಉದ್ದೇಶವನ್ನು 'ವಿದ್ಯಾಗಮ' ಹೊಂದಿದೆ. ಶಿಕ್ಷಕರ ಮಾರ್ಗದರ್ಶನದ ಮೇರೆಗೆ ಮಕ್ಕಳನ್ನು ಸ್ವಯಂ ಕಲಿಕೆಗೆ ಪ್ರೇರೇಪಿಸುವುದು ಈ ಯೋಜನೆಯ ಮುಖ್ಯ ಗುರಿ.

'ವಿದ್ಯಾಗಮ'ದ ಗುರಿಸಾಧನೆಗಾಗಿ ಶಿಕ್ಷಕರು ಎರಡು ರೀತಿಯಲ್ಲಿ ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ. ಮೊದಲನೆಯ ಹಂತದಲ್ಲಿ, ಸ್ಮಾರ್ಟ್ ಫೋನ್ ಹೊಂದಿರುವ ವಿದ್ಯಾರ್ಥಿಗಳನ್ನು ಗುರ್ತಿಸಿ, ಅವರಿಗೆ ಆನ್‌ಲೈನ್ ಮೂಲಕ ಬೋಧಿಸುವುದು. ಆನ್‌ಲೈನ್ ಸಂಪರ್ಕ ಹೊಂದಿಲ್ಲದ ವಿದ್ಯಾರ್ಥಿಗಳನ್ನು ಗುರ್ತಿಸಿ ಅವರಿಗೆ ನೇರವಾಗಿ ಶಿಕ್ಷಣ ನೀಡುವುದು ಎರಡನೇ ಹಂತ. ನಿರ್ದಿಷ್ಟ ಪ್ರದೇಶದಲ್ಲಿನ ಮಕ್ಕಳನ್ನು ಶಿಕ್ಷಕರು ಗುರ್ತಿಸಿ, ಅವರನ್ನು ಸಮುದಾಯ ಭವನ, ಧಾರ್ಮಿಕ ಸ್ಥಳ ಅಥವಾ ಮರದ ಕೆಳಗೆ ಒಟ್ಟುಗೂಡಿಸಿ ಬೋಧಿಸುವುದು ಎರಡನೇ ಹಂತ. ಈ ಚಟುವಟಿಕೆಗಳ ಜೊತೆಗೆ, ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಮನೆಯಲ್ಲಿಯೇ ನೀಡುವುದು ಸಾಧ್ಯವಾಗುವಂತೆ ಪೋಷಕರಿಗೆ ಆಹಾರ ಧಾನ್ಯಗಳನ್ನು ವಿತರಿಸುವ ಕೆಲಸವನ್ನೂ ಶಿಕ್ಷಕರು ಮಾಡಬೇಕಾಗಿದೆ.

ಮಕ್ಕಳು ಶಾಲೆಗೆ ಬರುವುದು ಸಾಧ್ಯವಾಗದ ಸಂದರ್ಭದಲ್ಲೂ ಅವರು ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಆಶಯದ 'ವಿದ್ಯಾಗಮ' ಯೋಜನೆ ಮೇಲ್ನೋಟಕ್ಕೆ ಚೆನ್ನಾಗಿಯೇ ಕಾಣಿಸುತ್ತದೆ. ಆದರೆ, ಈ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸುವುದು ಸಾಧ್ಯವೇ ಎಂದು ಯೋಚಿಸಿದರೆ, ಶಿಕ್ಷಣ ಇಲಾಖೆಯ ಅಧಿಕಾರಿಗಳು ದಂತಗೋಪುರದಿಂದ ಹೊರಗೆ ಬಾರದಿರುವುದು ಸ್ಪಷ್ಟವಾಗುತ್ತದೆ. ಶಾಲೆಯ ಚೌಕಟ್ಟಿನಾಚೆಗೆ ಮಕ್ಕಳಿಗೆ ಕಲಿಸಬಲ್ಲಷ್ಟು ಸಂಖ್ಯೆಯ ಶಿಕ್ಷಕರು ಎಲ್ಲಿದ್ದಾರೆ ಹಾಗೂ ಆನ್‌ಲೈನ್ ಶಿಕ್ಷಣವನ್ನು ನೀಡಲು ಅವರು ಎಷ್ಟರಮಟ್ಟಿಗೆ ಸಮರ್ಥರಾಗಿದ್ದಾರೆ ಎನ್ನುವ ಪ್ರಶ್ನೆಗೆ ಉತ್ತರವನ್ನು ಹುಡುಕಲು ಹೋದರೆ, 'ವಿದ್ಯಾಗಮ' ಯೋಜನೆ ಅನುಷ್ಠಾನ ಎಷ್ಟರಮಟ್ಟಿಗೆ ಪ್ರಾಯೋಗಿಕ ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಹೆಚ್ಚಿನ ಕಸರತ್ತೇನೂ ಅಗತ್ಯವಿಲ್ಲ. ಬಹುತೇಕ ಶಿಕ್ಷಕರನ್ನು 'ಕೋವಿಡ್ 19'ಕ್ಕೆ ಸಂಬಂಧಿಸಿದ ಕೆಲಸಗಳಿಗಾಗಿ ಸರ್ಕಾರವೇ ನಿಯೋಜಿಸಿದೆ. ಹಾಗಾಗಿ, ಶಾಲೆಗಳಲ್ಲೀಗ ಉಳಿದಿರುವವರಲ್ಲಿ ಹೆಚ್ಚಿನ ಮಂದಿ, ವಯಸ್ಸಾದವರು ಹಾಗೂ ದುರ್ಬಲರು ಎಂದು ಸರ್ಕಾರವೇ ಗುರ್ತಿಸಿರುವ ಶಿಕ್ಷಕರು ಮಾತ್ರ. ಇಂಥ ಶಿಕ್ಷಕರಲ್ಲಿ ಸಮೀಕ್ಷೆ ನಡೆಸಿ, ಆನ್‌ಲೈನ್ ಮೂಲಕ ಇಲ್ಲವೇ ಮಕ್ಕಳ ಸಣ್ಣ ಸಣ್ಣ ಗುಂಪುಗಳನ್ನು ರಚಿಸಿಕೊಂಡು ಕಲಿಸುವಷ್ಟು ಉತ್ಸಾಹ ಹಾಗೂ ಸಾಮರ್ಥ್ಯವಿದೆಯೇ?

ಆನ್‌ಲೈನ್ ಸವಲತ್ತು ಹೊಂದಿಲ್ಲದ ಮಕ್ಕಳಿಗೆ ಧಾರ್ಮಿಕ ಸ್ಥಳ, ಸಮುದಾಯ ಭವನ ಅಥವಾ ಮರದ ನೆರಳಿನ ಕೆಳಗೆ ಭೌತಿಕ ಅಂತರವನ್ನು ಕಾಪಾಡಿಕೊಂಡು ಕಲಿಸಬೇಕೆನ್ನುವ ಸೂಚನೆಯನ್ನು ಗಮನಿಸಿದರೆ, ಗುರುಕುಲ ಪದ್ಧತಿಗೆ ಮತ್ತೆ ಜೀವ ಕೊಡುವ ಹಂಬಲ ಸರ್ಕಾರಕ್ಕಿದ್ದಂತೆ ಕಾಣಿಸುತ್ತದೆ. ಶಿಕ್ಷಕರ ಸುರಕ್ಷತೆಯ ಬಗ್ಗೆ ತಲೆ ಕೆಡಿಸಿಕೊಳ್ಳದ ವ್ಯವಸ್ಥೆ, ಈಗ ಮಕ್ಕಳ ಸುರಕ್ಷತೆಯನ್ನೂ ಕೈಬಿಟ್ಟಂತಿದೆ. ಮಕ್ಕಳನ್ನು ಶಾಲೆಗೆ ಕಳುಹಿಸಲೇ ಪೋಷಕರು ಹಿಂಜರಿಯುವ ಸಂದರ್ಭವಿರುವಾಗ, ಧಾರ್ಮಿಕ ಸ್ಥಳ ಅಥವಾ ಮರದ ಕೆಳಗೆ ತರಗತಿಗಳು ಸುರಕ್ಷಿತವಾಗಿ ನಡೆಯುತ್ತವೆಂದು ನಿರೀಕ್ಷಿಸುವುದು ಹೇಗೆ? ಭೌತಿಕ ಅಂತರದೊಂದಿಗೆ ಮರದ ಕೆಳಗೋ ಮತ್ತೆಲ್ಲೋ ಮಕ್ಕಳು ಸೇರುವುದು ಸಾಧ್ಯವಾದರೆ, ಶಾಲೆಗಳಿಗೆ ವಿದ್ಯಾರ್ಥಿಗಳು ಬರುವುದಕ್ಕೆ ಇರುವ ಅಡ್ಡಿಯಾದರೂ ಏನು?

'ವಿದ್ಯಾಗಮ' ಯೋಜನೆಯ ಮಹತ್ವ ಇರುವುದು, ಖಾಸಗಿ ಶಿಕ್ಷಣ ಸಂಸ್ಥೆಗಳು ಆನ್‌ಲೈನ್ ಶಿಕ್ಷಣದ ಮೊದಲ ತ್ರೈಮಾಸಿಕವನ್ನು ಪೂರೈಸುತ್ತಿರುವ ಸಂದರ್ಭದಲ್ಲಾದರೂ ಸರ್ಕಾರಿ ಶಾಲೆಗಳ ಮಕ್ಕಳ ಕಲಿಕೆಯ ಬಗ್ಗೆ ಶಿಕ್ಷಣ ಇಲಾಖೆ ಯೋಚಿಸುತ್ತಿದೆ ಎನ್ನುವುದರಲ್ಲಿ. ಆದರೆ, ಈ ಯೋಜನೆಯನ್ನು ತಕ್ಕಮಟ್ಟಿಗಾದರೂ ಕಾರ್ಯರೂಪಕ್ಕೆ ತರಲು ಅಗತ್ಯವಾದ ಸಂಖ್ಯೆಯ ಶಿಕ್ಷಕರನ್ನು ಇಲಾಖೆ ಹೊಂದಿಲ್ಲ. ಮಕ್ಕಳಿಗೆ ಪಾಠ ಹೇಳಬೇಕಾದ ಶಿಕ್ಷಕರೆಲ್ಲ 'ಕೊರೊನಾ ಕಾರ್ಯಪಡೆ'ಯ ಸದಸ್ಯರಾಗಿಬಿಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ಸರ್ಕಾರ 'ವಿದ್ಯಾಗಮ'ದ ಕಲ್ಪನೆಯನ್ನು ಹರಿಯಬಿಟ್ಟಿದೆ. ಪ್ರಸಕ್ತ ಚಾಲ್ತಿಯಲ್ಲಿರುವ ಅಸಮಾನ ಶಿಕ್ಷಣ ವ್ಯವಸ್ಥೆಗೆ ಪೂರಕವಾದ ಮತ್ತೊಂದು ಯೋಜನೆಯಂತೆ ಕಾಣಿಸುವ 'ವಿದ್ಯಾಗಮ', ಸಿಕ್ಕವರಿಗೆ ಸೀರುಂಡೆ ಎನ್ನುವ ಮಾತನ್ನು ಶಿಕ್ಷಣದ ವಿಷಯದಲ್ಲೂ ನಿಜವಾಗಿಸಲು ಹೊರಟಂತಿದೆ ಹಾಗೂ ಬೋಧನಾ ವ್ಯವಸ್ಥೆಯನ್ನು ಮರದ ಕೆಳಗೆ ತಂದುನಿಲ್ಲಿಸಿದೆ.

■ ರಘುನಾಥ ಚ.ಹ.


ಈಶ್ವರ್